**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು.**

**ಎಸ್ ಸಿ ಕೇಸ್ ನಂ. 155/2023**

| | | |
|---|---|---|
| ಸಾಕ್ಷಿದಾರರ ಹೆಸರು | ಜಿ ಶೇಖರ್ | ಫ್ರಾಸಾ – 3 ಚಾಸಾ – 1 |
| ತಂದೆಯ ಹೆಸರು | ಗುರುಬಸವೇಗೌಡ | |
| ವಯಸ್ಸು | 47 ವರ್ಷ | ಪ್ರಮಾಣ ವಚನ ಮಾಡಿದ ದಿನಾಂಕ.**31.01.2025** |
| ವೃತ್ತಿ | ಪೋಲಿಸ್ ಇನ್ಸಪೆಕ್ಟರ್ ಜಾಲಹಳ್ಳಿ ಸಂಚಾರ ಪೋಲಿಸ್ ಠಾಣೆ, | |
| ವಾಸ ಸ್ಥಳ | ಬೆಂಗಳೂರು | |

**ಮುಖ್ಯ ವಿಚಾರಣೆ – ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು 27.06.2014 ರಿಂದ 11.07.2016 ರವರೆಗೆ ಕುವೆಂಪು ನಗರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ದಿನಾಂಕ 19.06.2015 ರಂದು ಮದ್ಯಾಹ್ನ 12.30 ಗಂಟೆಗೆ ನನಗೆ ನೃಪತುಂಗ ರಸ್ತೆ , ಎಂ ಬ್ಲಾಕ್ , ಮನೆ ನಂ ಸಿ 71 ,ಮೊದಲ ಮಹಡಿಯಲ್ಲಿರುವ ಅಲಂಕಾರ್ ಫ್ರಾಮಿಲಿ ಸಲೂನ್ ಮತ್ತು ಟ್ಯಾಟೂಸ್ ಹೆಸರಿನ ಅಂಗಡಿಯಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂದು ಬಂದ ಖಚಿತ ಮಾಹಿತಿಯಂತೆ ಸ್ವ ವರದಿ ತಯಾರಿಸಿ ಕ್ರೈ ನಂ 91/15 ರಂತೆ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಮತ್ತಉ ಮೇಲಾಧಿಕಾರಿಗೆ ತಿಳಿಸಿದೆ. ಈಗ ನಾನು ನೋಡುತ್ತಿರುವದಾಖಲೆ ಸ್ವ ವರದಿ ಇದ್ದು, ಸದರಿ ದಾಖಲೆಯನ್ನು ನಿಪಿ–2 ಎಂದು , ಸಹಿಯನ್ನು ನಿಶಾನೆ **ಪಿ–2(ಎ)** ಎಂದು ಗುರುತಿಸಲಾಯಿತು. ಈಗ ನಾನು

ನೋಡುತ್ತಿರುವ ದಾಖಲೆ ಪ್ರ ವ ವ ಇದ್ದು, ಆದರಲ್ಲಿ ನನ್ನ ಸಹಿ ಇದೆ. ಸದರಿ ಪ್ರ ವ ವ ವನ್ನು **ನಿಪಿ–3** ಎಂದು, ಸಹಿಯನ್ನು ನಿಶಾನೆ **ಪಿ–3(ಎ)** ಎಂದು ಗುರುತಿಸಲಾಯಿತು. ನಂತರ ದಾಳಿ ಮಾಡುವ ಸಲುವಾಗಿ ವಾರೆಂಟ್ಟ ನೀಡುವಂತೆ ಎಸಿಪಿ ರವರಿಗೆ ಕೇಳಿಕೊಂಡಿದ್ದು, ಅವರಿಂದ ವಾರೆಂಟ್ ಅನ್ನು ಪಡೆದು, ಪಂಚರಾದ ಸುರೇಶ ಮತ್ತು ಪುನೀತ್ ಠಾಣೆಗೆ ಕರೆಸಿ ,ಅ ವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ , ಪಂಚರು ಮತ್ತು ಸಿಬ್ಬಂದಿಗಳಾದ ಚಾಸಾ–6 ರಿಂದ ಚಾಸಾ–9 ರವರ ಜೊತೆ ಆ ಅಂಗಡಿಗೆ ಬೇಟಿ ನೀಡಿದ್ದೆವು .

ಆ ಅಂಡಿಯ ಒಳಗೆ ಹೋಗಿ ನೋಡಲಾಗಿ ಅಲ್ಲಿ ಸ್ವಾಗತ ವಿಭಾಗದಲ್ಲಿ ಒಬ್ಬ ಗಂಡಸು ಕುಳಿತಿದ್ದು ,ಅ ವರನ್ನು ವಿಚಾರಿಸಿದಾಗ ರಂಗಪ್ಪ ಎಂದು ತಿಳಿಸಿದ್ದು ,ಆ ಅಂಗಡಿ ನಡೆಸಲು ಪರವಾನಗಿ ಪಡೆದಿರುವ ಬಗ್ಗೆ ವಿಚಾರಿಸಿದಾಗ ಪರವಾನಗಿ ಪಡೆದಿಲ್ಲ ಎಂದು ತಿಳಿಸಿದರು. ನಂತರ ಒಳಗಡೆ ಪರಿಶೀಲಿಸಿದಾಗ, ಹಾಲಿನಲ್ಲಿ ವಿಭಾಗಿಸಿ 6 ಸಣ್ಣ ಸಣ್ಣ ಕೊಠಡಿಗಳಾಗಿ ಮಾಡಿರುತ್ತಾರೆ. ಅದರಲ್ಲಿ ನಾವು ಮೊದಲ ರೂಮಿಗೆ ಪ್ರವೇಶ ಮಾಡುವಷ್ಟರಲ್ಲಿ ಪಕ್ಕದ ರೂಮಿನಲ್ಲಿದ್ದ ಒಬ್ಬ ವ್ಯಕ್ತಿ ಓಡಿ ಹೋಗಿದ್ದ. ನಂತರ ಆ ರೂಮಿಗೆ ಹೋಗಿ ನೋಡಲಾಗಿ ಒಬ್ಬ ಹೆಂಗಸು ಅಸ್ತವ್ಯಸ್ತವಾಗಿ ಇದ್ದು, ಬಟ್ಟೆಗಳನ್ನು ಸರಿಪಡಿಸಿಕೊಳ್ಳುತ್ತಿದ್ದಳು. ಆ ಸ್ಥಳದಲ್ಲಿ ಉಪಯೋಗಿಸಿದ 2 ಕಾಂಡಮ್ಗಳಿದ್ದು , ಆ ಮಹಿಳೆಯನ್ನು ವಿಚಾರಿಸಿದಾಗ ಕಾವ್ಯ , ಶಾರದಾದೇವಿ ನಗರ ಮೈಸೂರು ಎಂದು ತಿಳಿಸಿದ್ದು, ಓಡಿ ಹೋದವರ ಹೆಸರು ನನಗೆ ಗೊತ್ತಿಲ್ಲ ಎಂದು ತಿಳಿಸಿದರು. ನಂತರ ಪಕ್ಕದ ಇನ್ನೊಂದು ರೂಮಿಗೆ ಹೋಗಿ ನೋಡಲಾಗಿ ಅಲ್ಲಿ ಒಬ್ಬ ಮಹಿಳೆ ಮತ್ತು ಒಬ್ಬ ಪುರುಷ

ಅರೆನಗ್ನರಾಗಿದ್ದು, ವಿಚಾರಿಸಲಾಗಿ ನೀತು ಶೆಟ್ಟಿ, ಮೈಸೂರು, ಪುರುಷ ಅನಿಲ್ ಕುಮಾರ್ ಎಂದು ತಿಳಿಸಿದ್ದರು. ಸದರಿ ಅಂಗಡಿಯು ಹರ್ಷ ಎಂಬುವವರಿಗೆ ಸೇರಿದ್ದಾಗಿದ್ದು . ಹರ್ಷರವರ ತಂದೆ ಸ್ವಾಗತ ವಿಭಾಗದಲ್ಲಿ ಕುಳಿತ ರಂಗಪ್ಪ ಇರುತ್ತಾರೆ. ಅನಿಲ್ ಕುಮಾರ್ ರವರು ಗಿರಾಕಿಗಳನ್ನು ತಂದು ಅಂಗಡಿಗೆ ಕೊಡುವುದಾಗಿ ತಿಳಿದು ಬಂದಿರುತ್ತದೆ. ನಂತರ ಅಲ್ಲಿ ಬಳಕೆ ಮಾಡಿದ 2 ಕಾಂಡಮ್ ಗಳು ಮತ್ತು 1 ಕಾಂಡಮ್ ಪ್ಯಾಕೆಟ್ , 2 ಕಪ್ಪು ಬಣ್ಣದ ತಲೆ ದಿಂಬು , ಒಂದು ಹಸಿರು ಬಣ್ಣದ ಟವೆಲ್ , ಕಾವ್ಯ ರವರ ಬಳಿ ಇದ್ದ 1000 ಹಣ , ಅನಿಲ್ ಕುಮಾರ( ರವರ ಬಳಿ ಇದ್ದ 2500/- ಹಣ ಮತ್ತು 1 ಮೊಬೈಲ್ ಫೋನ್ ಮತ್ತು ರಂಗಪ್ಪ ರವರ ಬಳಿ ಇದ್ದಸ್ಯಾಮ್ ಸಂಗ್ ಮೊಬೈಲ್ ಅನ್ನು ವಶಪಡಿಸಿಕೊಂಡಿದ್ದೆ. ಸದರಿ ಮಹಜರ್ ಅನ್ನು ಮದ್ಯಾಹ್ನ 2.00-3.00 ಗಂಟೆವರೆಗೆ ಬರೆಯಲಾಯಿತು. ಮಹಜರ್ ಗೆ ಪಂಚರು, ನೊಂದ ಮಹಿಳೆಯರು, ಆರೋಪಿತರು ಮತ್ತು ಸಿಬ್ಬಂದಿಗಳ ಸಹಿ ಪಡೆದಿದ್ದೆ.

ನಾನು ಈಗ ನೋಡುತ್ತಿರುವ ದಾಖಲೇ ಆ ಮಹಜರ್ ಇದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಮಹಜರ್ ಅನ್ನು **ನಿಪಿ-4** ಎಂದು , ಸಹಿಯನ್ನು **ನಿಪಿ-4(ಎ)** ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಇನ್ನೆರಡು ಸಹಿಗಳು ಆರೋಪಿತರ ಸಹಿಗಳು ಇವೆ. ಸದರಿ ಸಹಿಗಳನ್ನು **ನಿಪಿ-4(ಬಿ)** ಮತ್ತು **ನಿಪಿ-4(ಸಿ)** ಎಂದು ಗುರುತಿಸಿದೆ .ಈಗ ನಾನು ನೋಡುತ್ತಿರುವ ಇನ್ನೆರಡು ಸಹಿಗಳು ನೊಂದ ಮಹಿಳೆಯರ ಸಹಿಇ ವೆ. ಸದರಿ ಸಹಿಗಳನ್ನು **ನಿಪಿ-4(ಡಿ)** ಮತ್ತು **ನಿಪಿ-4(ಇ) ಎಂ**ದು ಗುರುತಿಸಿದೆ . ಆ ದಿನ ಅಮಾ

ನತ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರತಿಸುತ್ತೇನೆ. ಈಗ ನಾನು ನೋಡುತ್ತಿರುವ ಎಂ ಒ 1 ರಿಂದ 7 ಎಂದು ಗುರುತಿಸಿರುವ ವಸ್ತುಗಳು ಆ ದಿನ ಅಮಾನತ್ತುಪಡಿಸಿಕೊಂಡ ವಸ್ತುಗಳು ಇವೆ. ಆ ಕಾಲಕ್ಕೆ 1 ಮತ್ತು 2 ನೇ ಆರೋಪಿತರು ಆ ಅಂಗಡಿಯನ್ನು ನಡೆಸುತ್ತಿರುವುದಾಗಿ ಹೇಳಿದರು. ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ಅಂಗಡಿ ಮಾಲೀಕರಾದ ಹರ್ಷ ಮತ್ತು ರಂಗಪ್ಪ ಇರುತ್ತಾರೆ. ನಂತರ ಠಾಣೆಗೆ ಬಂದು ವಶಪಡಿಸಿಕೊಂಡಿದ್ದ ಮಾಲುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 55/2015 ರಂತೆ ನಮೂದಿಸಿ ನ್ಯಾಯಾಲಯಕ್ಕೆ ಕಳುಹಿಸಿದ್ದೆ. ನಂತರ ಪಂಚರಾದ ಸುರೇಶ ಮತ್ತು ಪುನೀತ್ ರವರ ಹೇಳಿಕೆಗಳನ್ನು ಪಡೆದಿದ್ದೆ. ನಂತರ ಸಾಕ್ಷಿದಾರರು ಚಾಸಾ-4 ರಿಂದ ಚಾಸಾ-9 ರವರ ಹೇಳಿಕೆ ಪಡೆದಿದ್ದೆ. ನಂತರ ನೊಂದ ಮಹಿಳೆಯರಾದ ಕಾವ್ಯ ಮತ್ತು ನೀತು ಶೆಟ್ಟಿ ಹಾಗೂ ಆರೋಪಿಗಳಾದ ರಂಗಪ್ಪ ಮತ್ತು ಅನಿಲ್ ಕುಮಾರ್ ರವರ ಹೇಳಿಕೆಯನ್ನು ಪಡೆದಿದ್ದೆ. ನಂತರ ಆರೋಪಿತರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ದಸ್ತಗಿರಿ ಮಾಡಿ ನ್ಯಾಯಲಯಕ್ಕೆ ಹಾಜರುಪಡಿಸಿದ್ದೆ. ನಂತರ ಮನೆ ಮಾಲೀಕ ಶ್ರೀಮತಿ ಹೆಚ್ ಆರ್ ಬಾಗ್ಯ ರವರ ಹೇಳಿಕೆಯನ್ನು ಪಡೆದಿದ್ದೆ. ಸದರಿಯವರು ಹಾಜರುಪಡಿಸಿದ್ದ ಬಾಡಿಗೆ ಕರಾರಿನ ನಕಲು ಪ್ರತಿಯನ್ನು ಪಡೆದುಕೊಂಡಿದ್ದೆ. ನಿಪಿ-1 ಆ ಬಾಡಿಗೆ ಕರಾರು ಪತ್ರದ ಪ್ರತಿ ಇದೆ. ನಂತರ 30.07.2015 ರಂದು ಸದರಿಯವರ ಜಾಗದ ಬಗ್ಗೆ ಮತ್ತು ಅವರ ಉದ್ಯಮ ನಡೆಸುವ ಬಗ್ಗೆ ಪರವಾನಗಿ ಪಡೆದಿದ್ದರ ಎಂದು ಮಾಹಿತಿ ಕೋರಿ ಪತ್ರ ಬರೆದಿದ್ದೆ. 21.08.2015 ರಂದು ಸದರಿಯವರು ಯಾವುದೇ ಪರವಾನಗಿ ಪಡೆದಿಲ್ಲ

ಎಂದು ವರದಿ ನೀಡಿದ್ದರು. ಈಗ ನಾನು ನೋಡುತ್ತಿರುವ ದಾಖಲೆ ಮಹಾನಗರ ಪಾಲಿಕೆಯಿಂದ ಪಡೆದ ದಾಖಲೆ ಇವೆ. ಸದರಿ ದಾಖಲೆಯನ್ನು **ನಿಪಿ–5** ಎಂದು ಗುರುತಿಸಲಾಯಿತು. ದಾಳಿ ವೇಳೆಯಲ್ಲಿ ಅಲಂಕಾರ್ ಫ್ಯಾಮಿಲ ಸಲೂನ್ ಮತ್ತು ಟ್ಯಾಟುಸ್ ನ ವಿಸಿಟಿಂಗ್ ಕಾರ್ಡ್ ಮತ್ತು ಪಾಂಪ್ಲೇಟ್ ದೊರೆತಿದ್ದು , ಅವನ್ನು ಸಹ ವಶಕ್ಕೆ ಪಡೆದಿದ್ದೆ. ಈಗ ನಾನು ನೋಡುತ್ತಿರುವ ದಾಖಲೆ ಅವೆ ಇವೆ. ಸದರಿ ದಾಖಲೆಗಳನ್ನು **ನಿಪ – 6** ಮತ್ತು **ನಿಪಿ–7** ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆ ದಾಳಿಗಿಂತ ಮೊದಲೇ ಪಡೆದ ವಾರೆಂಟ್ ಇದೆ ಸದರಿ ವಾರೇಂಟನ್ನು **ನಿ ಪಿ–8** ಎಂದು ಗುರುತಿಸಿದೆ. ನಂತರ ತನಿಖೆಯನ್ನು ಪೂರೈಸಿ ಆರೋಪಣ ಪಟ್ಟಿಯನ್ನು ಸಲ್ಲಿಸಿದ್ದೆ

**ಪಾಟೀ ಸವಾಲು – ಆರೋಪಿತರ ಪರ ಎ ಕೆ ವಿ ವಕೀಲರಿಂದ :**

ಪಂಚರಿಗೆ ಲಿಖಿತ ನೋಟೀಸು ಕೊಟ್ಟಿರಲಿಲ್ಲ. ಆ ಕಟ್ಟಡ ಇರುವ ರಸ್ತೆ ವಾಣಿಜ್ಯ ಮತ್ತು ವಸತು ಕಟ್ಟಡಗಳು ಇವೆ. ಆ ರಸ್ತೇ ವಾಣಿಜ್ಯ ಕಟ್ಟಡಗಳ ರಸ್ತೆಯೋ ಅಥವಾ ವಸತಿ ಕಟ್ಟಡಗಳ ರಸ್ತೆಯೋ ಎಂದು ನಾನು ದಾಖಲೆ ಪಡೆದಿಲ್ಲ. ಆ ಕಟ್ಟಡ 2 ಹಂತಸ್ತಿನ ಕಟ್ಟಡ ಇತ್ತು. ಆ ಕಟ್ಟಡದ ನೆಲ ಮಹಡಿಯಲ್ಲಿ ವಾಸದ ಮನೆ ಇತ್ತು. ಮೊದಲ ಮಹಡಿಯಲ್ಲಿ ಒಂದೇ ಬಾಗಿಲಿದ್ದು , ಅದರಲ್ಲಿ ಆರೋಪಿತರ ಅಂಗಡಿ ಇತ್ತು. ಆ ಕಟ್ಟಡಕ್ಕೆ ಹೊಂದಿಕೊಂಡು ಎರಡು ಬದಿಯಲ್ಲಿ ವಾಸದ ಮನೆಗಳಿವೆ. ಆ ಕಟ್ಟಡದ ಮೊದಲ ಮಹಡಿಗೆ ಹೋಗಲು

ಒಂದೇ ಕಡೆ ಮೆಟ್ಟಿಲುಗಳು ಇವೆ. ಆ ಮೆಟ್ಟಿಲುಗಳ ಅಳತೆ ನಿಖರವಾಗಿ ಹೇಳಲು ಆಗುವುದಿಲ್ಲ. ಆ ಕಟ್ಟಡ ದ ಮೊದಲ ಮಹಡಿಯಲ್ಲಿ ಕಾರಿಡಾರ್ ಎಷ್ಟು ಅಳತೆಯಲ್ಲಿದೆ ಎಂದು ಗೊತ್ತಿಲ್ಲ. ಇಲಾಖಾ ವಾಹನವನ್ನು ಆ ಕಟ್ಟಡದಿಂದ ಸ್ವಲ್ಪ ದುರಾದಲ್ಲಿ ನಿಲ್ಲಿಸಿದ್ದೆ. ಆ ದಿನ ನನ್ನೊಂದಿಗೆ ಚಾಲಕನನ್ನು ಸೇರಿ ಒಟ್ಟು ನಾವು 8 ಜನ ಇದ್ದರು. ಚಾಲಕನನ್ನು ಹೊರತುಪಡಿಸಿ ಉಳಿದ ಎಲ್ಲರು ಮೊದಲ ಮಹಡಿಗೆ ಬಂದಿದ್ದೆವು. ಆ ಅಂಗಡಿಯ ಮುಖ್ಯ ಬಾಗಿಲು 2–2.5 ಅಡಿ ಇದೆ, ನಿಖರವಾಗಿ ಹೇಳಲು ಬರುವುದಿಲ್ಲ. ಮೊದಲ ಮಹಡಿಯ ಕಾರಿಡಾರ್ ಮತ್ತು ಬಾಗಿಲಿನ ಬಳಿ 4–5 ಜನ ನಿಂತರೆ, ಬೇರೆಯವರು ಓಡಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಆ ದಿನ ಅಕ್ಕಪಕ್ಕದ ಜನರು ತನಿಖೆಗೆ ಸಹಕಾರ ನೀಡಿಲ್ಲ ಆದರೆ ಅವರಿಗೆ ಲಿಖಿತ ನೋಟೀಸು ನೀಡಿಲ್ಲ. ವಿಸಿಟಿಂಗ್ ಕಾರ್ಡ್ ಅಲ್ಲಿ ಹರ್ಷ ರವರ ಹೆಸರು ಇದೆ. ವಿಸಿಟಿಂಗ್ ಕಾರ್ಡ್ ಮತ್ತು ಪಾಂಪ್ಲೇಟ್‌ನ್ನು ಯಾರು ಪ್ರಿಂಟ್ ಮಾಡಿರುತ್ತಾರೆ ಎಂದು ಗೊತ್ತಿಲ್ಲ, ಅವನ್ನು ಯಾರು ಬೇಕಾದರು ಪ್ರಿಂಟ್ ಮಾಡಬಹುದು ಎಂದರೆ ನಿಜ. ನಿಪಿ–1 ರಲ್ಲಿ ನಮೂದಿರುವ ಹೆಚ್ ಪಿ ಕೃಷ್ಣೇಗೌಡ ಇವರ ಬಗ್ಗೆ ನಾನು ವಿಚಾರಿಸಿಲ್ಲ. ಆ ದಿನ ನಾನು ನನ್ನ ಮುಖ್ಯ ವಿ ಚಾರಣೆಯಲ್ಲಿ ಹೇಳಿರುವಂತೆ ಆ ಸ್ಥಳಕ್ಕೆ ಬೇಟಿ ಮಾಡಿಲ್ಲ ಮತ್ತು ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ . ಆ ದಿನ 2 ನೇ ಆರೋಪಿಯನ್ನು ಸ್ಥಳದಲ್ಲಿ ಬಂಧಿಸಿಲ್ಲ ಎಂದರೆ ಸರಿಯಲ್ಲ. ಆ ದಿನ ನೊಂದ ಮಹಿಳೆಯರು ಆ ಸ್ಥಳದಲ್ಲಿದ್ದರು ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಯಹಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು

ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಯಾವುದೇ ಸಾಕ್ಷಿಗಳು ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಯಾವುದೇ ತಪ್ಪು ಮಾಡದೇ ಇದ್ದರೂ ಅವರ ವಿರುದ್ಧ ಆರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮೈಸೂರು.